೧೨) ದಕ್ಷಿಣ ಕನ್ನಡ ಜಿಲ್ಲೆಯ ಗಂಗೊಳ್ಳಿಯಲ್ಲಿರುವ "ಆಕ್ಷನ್ ಹಾಲ್"ನ್ನು ಖಾಸಗೀ ಯವರಿಗೆ ಸಬ್-ಲೀಜ್ ಮಾಡಿರುವುದು

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯ ಗಂಗೊಳ್ಳಿಯಲ್ಲಿ ಕೆಲವು ವರ್ಷಗಳ ಹಿಂದೆ ಮೀನುಗಾರಿಕಾ ಕಸಬಿನವರಿಗೆ ಅನುಕೂಲವಾಗುವಂತೆ ಬಂದರು ಇಲಾಖೆಯವರು ಒಂದು 'ಆಕ್ಷನ್ ಹಾಲ್' ಕಟ್ಟಿಸಿ, ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಅನುಕೂಲ ಒದಗಿಸಲು ಗಂಗೊಳ್ಳಿ ಮೀನುಗಾರರ ಸಹಕಾರ ಸಂಘ ವಶಕ್ಕೆ ನೀಡಿದರು. ಪರ್ಸಿನ್ ಹಾಗೂ ಟ್ರಾಲ್ ಬೋಟು ಗಳವರು ಬಲೆ ರಿಪೇರಿ ಮತ್ತು ಇತರ ಉದ್ದೇಶಗಳಿಗೆ ಇದನ್ನು ಉಪಯೋಗಿಸುತ್ತಿದ್ದರು. ಈಗ ಈ ಆಕ್ಷನ್ ಹಾಲ್ ಅನ್ನು ಬಂದರು ಇಲಾಖೆಯವರ ಸೂಚನೆಗೆ ವಿರುದ್ಧವಾಗಿ ಒಬ್ಬ ಖಾಸಗಿ ವ್ಯಕ್ತಿಗೆ ಸಬ್-ಲೀಜ್ ಮಾಡಿರುತ್ತಾರೆ. ಇದು ನಿಯಮಕ್ಕೆ ವಿರುದ್ಧ ಹಾಗೂ ಸಮುದ್ರ ಮೀನುಗಾರರಿಗೆ ವಿರುದ್ಧವಾದ ಕ್ರಮವಾಗಿರುವುದರಿಂದ ಖಾಸಗಿಯವರಿಗೆ ನೀಡಿದ ಸಬ್-ಲೀಜ್‌ನ್ನು ವಜಾ ಮಾಡಿ, ಮೀನುಗಾರರೆಲ್ಲರ ಉಪಯೋಗಕ್ಕೆ ಸಿಗುವಂತಹ ಮೀನುಗಾರರ ಸಹಕಾರ ಸಂಘಕ್ಕೆ ನೀಡಬೇಕಾಗಿ ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರ ತರಿಸಿಕೊಡುತ್ತೇನೆ,

13) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ಪಡೆದವರಿಗೆ ಹಕ್ಕು ಪತ್ರಗಳನ್ನು ನೀಡಲು ಒತ್ತಾಯ

SMT. MUKTHARUNNISA.—The erstwile CITB, Bangalore issued notification on 9-3-1977 for acquisition of land in Saneguravanahalli and Kethamaranahalli which come under west of chord road. In the meeting of the CITB held on 25 3-1975. it was resolved to re-allot the sites to the Revenue site holders of the said land on a fixed rate and regularise the layout of West of Chord Road I Stage and part of III Stage. Accordingly some of the revenue site owners paid the amount due to CITB as per their decision during 1975, 76 and upto 1984. Some of them were issued possession certificates and some did not get. From 1985 onwards the BDA is not taking money and also not issuing possession certificates to those who have already deposited amount. They have made several representations to the Chairman as well as to the Chief Minister through Nivasigala Kshemabhivriddi Samithi, West of Chord Road (Basaveswaranagar) I Stage, V and VI Phase, Banga ore with no relief. Hence, I urge the Government to take suitable action in that regard and issue possession certificates to all those allottees after getting the required amount.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿಯು ಪಶ್ಚಿಮ ಕಾರ್ಡ್ ರಸ್ತೆಯ ೧ ಮತ್ತು ೩ನೇ ಹಂತಕ್ಕೆ ಸಾನೆಗುರುವನಹಳ್ಳಿ, ಕೇತಮಾರನಹಳ್ಳಿ ಮತ್ತು ಶಿವನಹಳ್ಳಿ ಗ್ರಾಮದ, ಈ ಕೆಳಗೆ ನಮೂದಿಸಿದ ಭೂಮಿಗಳನ್ನು ಭೂಸ್ವಾಧೀನ ಮಾಡಲು ಅಧಿಸೂಚನೆ ೯-೭-೧೯೮೮ರಲ್ಲಿ ಮತ್ತು ೫-೧೧-೧೧ರಲ್ಲಿ ಹೊರಡಿಸಿತು.

ಹಂತ	ಗ್ರಾಮ	ಸರ್ವೆ ನಂ.
೧ನೇ ಹಂತ	ಕೇತಮಾರನಹಳ್ಳಿ	೧೨೮, ೧೨೯, ೧೪೧, ೧೫೨, ೧೫೩, ೧೭೭, ೧೭೬ ಮತ್ತು ೧೫೧.
	ಶಿವನಹಳ್ಳಿ	೨, ೪, ೯, ೧೦, ೧೧ ೧೨, ೧೩, ೧೪, ೧೫, ೧೬ ೧೭, ೧೮, ೧೯, ೨೦, ೨೧, ೨೩, ೨೪, ೨೪, ೨೫ ೨೬, ೨೭, ೨೮, ೨೯, ೩೦, ೩೧, ೩೩, ೩೩, ೩೪
	ಸಾನೆಗುರುವನಹಳ್ಳಿ	೧೧೦, ೧೧೧, ೧ ೨, ೧೧೩, ೧೧೫, ೧೧೬, ೧೧೭ ಮತ್ತು ೧೧೮.
೩ನೇ ಹಂತ	ಶಿವನಹಳ್ಳಿ ಸಾನೆಗುರುವನಹಳ್ಳಿ	೬, ೭ ಮತ್ತು ೮ ೪, ೫ ಮತ್ತು ೧೧೯.

ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿಯು ರೆವಿನ್ಯೂ ನಿವೇಶನದಾರರ ಕೋರಿಕೆಯನ್ನು ಪರಿಗಣಿಸಿ, ಪಶ್ಚಿಮ ಕಾರ್ಡ್ ರಸ್ತೆಯ ಮೊದಲನೇ ಹಂತ ಮತ್ತು ೩ನೇ ಹಂತದಲ್ಲಿ ಕ್ರಮವಾಗಿ ೨೬೮ ನಿವೇಶನಗಳನ್ನು ಮತ್ತು ೧೩೭೪ ನಿವೇಶನಗಳನ್ನು ರಚಿಸಿತು. ಹಾಗೂ ಮಂಜ್ರಿರಸ್ತೆಗಳಿಗೆ ತೊಂದರೆಯಾಗದಂತೆ ಪರ್ಯಾಯ ರಸ್ತೆಗಳಿಗೆ ಸೂಕ್ತವಾದ ಬದಲಾವಣೆಗಳನ್ನು ಮಾಡಿ ಒಡಾವಣೆ ಶುಲ್ಕವನ್ನು ವಸೂಲು ಮಾಡುವ ಮೂಲಕ ಪರಾಮರ್ಶೆಯನ್ನು ದಿನಾಂಕ ೨೬-೨-೨೪ರ ಸಭೆಯ ವಿಷಯ ಸಂಖ್ಯೆ ೪೧೩೯ರಲ್ಲಿ ಹಾಗೂ ದಿನಾಂಕ ೨೫ ೩-೭೫ರ ಸಭೆಯ ವಿಷಯ ಸಂಖ್ಯೆ ೪೩೨೨ರ ಮಂಜೂರಾತಿ ನಿರ್ಣಯಿಸಿತು. ಆದರ ಪ್ರಕಾರ ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿ ತದನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮೊದಲನೇ ಹಂತದ ೯೬೦ ನಿವೇಶನದಾರರಿಂದಲೂ ಮತ್ತು ೩ನೇ ಹಂತದ ೨೬೯ ನಿವೇಶನದಾರರಿಂದಲೂ ಬಡಾವಣೆ ಶುಲ್ಕವನ್ನು ವಸೂಲು ಮಾಡಿ, ಮೊದಲನೇ ಹಂತದಲ್ಲಿ ೬೨೪ ನಿವೇಶನದಾರರಿಗೂ ಹಾಗೂ ೩ನೇ ಹಂತದಲ್ಲಿ ೨೪೯ ನಿವೇಶನದಾರರಿಗೂ ಸ್ವಾಧೀನ ಪತ್ರವನ್ನು ನೀಡಿದೆ.

ಈ ಕ್ರಮವು ಜಾರಿಯಲ್ಲಿರುವಾಗ ಕರ್ನಾಟಕ ಉಚ್ಚ ನ್ಯಾಯಾಲಯವು ೧೯೮೫-೮೬ರಲ್ಲಿ ಹಲವಾರು ತೀರ್ಪುಗಳ ಮೂಲಕ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಂಡ ಭೂಮಿಯನ್ನು ರೀಕನ್ವೆ: ಮಾಡು ಹಂಚಿಕೆಗಳನ್ನು ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರವಿಲ್ಲವೆಂದು ಮತ್ತು ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಂಡ ಭೂಮಿಯನ್ನು ಯೋಜನೆಗಾಗಿ ಉಪಯೋಗಿಸತಕ್ಕದೆಂದು ನೀಡಿದ ತೀರ್ಮಾನಗಳಿಗೆ ಅನುಗುಣವಾಗಿ, ಸರ್ಕಾರವು ದಿನಾಂಕ ೮-೫-೮೬ರಿಂದ ರೀಕನ್ವೆ ಮಾಡುವುದನ್ನು ನಿಲ್ಲಿಸಿದೆ ಆದುದರಿಂದ ರೆವಿನ್ಯೂ ನಿವೇಶನದಾರರಿಗೆ ರೀಕನ್ವೆ ಮಾಡಿ ಸ್ವಾಧೀನ ಪತ್ರಗಳನ್ನು ನೀಡಲು ಸಾಧ್ಯವಿಲ್ಲ.

೧೪) ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಮಾರಾಟ ತೆರಿಗೆ ಇಲಾಖೆಯ ಅಧಿಕಾರಿಗಳು ಕೆಂದಾಯ ಇಲಾಖೆಯ ಅಧಿಕಾರಿಗಳಿಂದ ಸರ್ಟಿಫಿಕೇಟ್ ತಂದು ತೋರಿಸು ಎಂತೆ ಒತ್ತಾಯಿಸಿ ಕಿರುಕುಳ ಕೊಡುತ್ತಿರುವುದು.

ಶ್ರೀ ವಿನಯ ಕುಮಾರ್ ಸೊರಕೆ(ಪುತ್ತೂರು).-ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವ್ಯವಸಾಯೋತ್ಪನ್ನ ಬೆಳೆಗಾರರು ಈವರೆಗೆ ತಾವು ಬೆಳೆಯುತ್ತಿದ್ದ ಬೆಳೆಗಳನ್ನು ಒಳ್ಳೆಯ ಬೆಲೆ ದೊರಕುವ ಕಡೆಗಳಿಗೆ ತೆಗೆದುಕೊಂಡು ಹೋಗಿ ಓನರ್‌ಶಿಪ್ ಡಿಕ್ಲರೇಷನ್ ಸರ್ಟಿಫಿಕೇಟನ್ನು ತ್ರಿಪ್ರತಿಯಲ್ಲಿ ಮಾಲು ತೆಗೆದುಕೊಳ್ಳುವವರ ಮೇಲು ರಾಜುವಿನೊಡನೆ ಸಂಬಂಧಪಟ್ಟ ಚಿಕ್‌ಪೋಸ್ಟ್‌ಗಳಲ್ಲಿ